# ಹೊಸತು



## ಕರಾಟ್‌ಲೇನ್ ಆಭರಣ

ವೈವಿಧ್ಯಮಯ ಆಭರಣಗಳನ್ನು ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕಂತೆ ತಯಾರಿಸಿ ಮಾರಾಟ ಮಾಡುವ ಕರಾಟ್‌ಲೇನ್ ಇದೀಗ ಹೊಸ ಹೊಸ ವಿನ್ಯಾಸಗಳ ಆಭರಣ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಕಿವಿಯೋಲೆ, ಪೆಂಡೆಂಟ್ ಮುಂತಾದವು ವಜ್ರ ಮತ್ತು 18 ಕ್ಯಾರಟ್ ಚಿನ್ನದಲ್ಲಿ ತಯಾರಾಗಿವೆ. ರೂಬಿ, ಎಮರಾಲ್ಡ್, ಮುತ್ತು, ಸಫೈರ್ ಮುಂತಾದ ಬೆಲೆ ಬಾಳುವ ಹರಳುಗಳನ್ನು ಬಳಸಲಾಗಿದೆ.
ಬೆಲೆ 36,996 ರೂಪಾಯಿಗಳಿಂದ ಆರಂಭ. ಮಾಹಿತಿಗೆ 982024440

## ಕಾಯ ಆ್ಯಂಟಿ-ಡ್ಯಾಂಡ್ರಫ್ ಶಾಂಪು

ತಲೆಹೊಟ್ಟು ಸಮಸ್ಯೆ ಇದ್ದವರಿಗಾಗಿ ಕಾಯ ಇದೀಗ ಹೊಸ ಆ್ಯಂಟಿ-ಡ್ಯಾಂಡ್ರಫ್ ಶಾಂಪು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ತಲೆಕೂದಲ ಬುಡಭಾಗದ ಚರ್ಮಕ್ಕೆ ದೀರ್ಘಕಾಲದ ಆರ್ದ್ರತೆಯನ್ನೂ ಒದಗಿಸುವ, ತಲೆಹೊಟ್ಟಿನ ಸಮಸ್ಯೆಗೆ ಪರಿಣಾಮಕಾರಿ ಪರಿಹಾರ ಒದಗಿಸುತ್ತದೆ ಈ ಶಾಂಪು ಎನ್ನುತ್ತದೆ ಕಂಪೆನಿ.

ಬೆಲೆ 200 ಎಂಎಲ್‌ಗೆ 390 ರೂಪಾಯಿ.

ಮಾಹಿತಿಗೆ: 080-39626182






## ಹೊಸ ವ್ಯಾನ್ಸ್ ಶೂ

ಪಾದರಕ್ಷೆ ತಯಾರಿಕಾ ಕಂಪೆನಿ ವ್ಯಾನ್ಸ್ ಇದೀಗ ಹೊಸ ವಿನ್ಯಾಸದ ಸ್ಪೋರ್ಟ್ಸ್ ಫುಟ್‌ವೇರ್ ಅನ್ನು ಬಿಡುಗಡೆ ಮಾಡಿದೆ. 'ಸರ್ಫ್ ಕಲೆಕ್ಷನ್' ಹೆಸರಿನಲ್ಲಿ ಹೊರತಂದಿರುವ ಈ ಶೂ ಧರಿಸಲು ಆರಾಮದಾಯಕವಾಗಿದೆ ಎನ್ನುತ್ತದೆ ಕಂಪೆನಿ. ಬೆಲೆ 3,499 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ. ವಿವರಕ್ಕೆ: 9820224440




## ಫಿಕಾಂ ಸ್ಮಾರ್ಟ್‌ಫೋನ್

ಫಿಕಾಂ ಕಂಪೆನಿ ಹೊಸ 4ಜಿ ಎಲ್‌ಟಿಇ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. 'ಎನರ್ಜಿ 653' ಹೆಸರಿನ ಈ ಫೋನ್ ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ. ಕ್ವಾಲ್ಕಾಂ ಟೆಕ್ನಾಲಜೀಸ್ ಇಂಕ್ ವಿನ್ಯಾಸವನ್ನು ಆಧರಿಸಿ ಈ ಸ್ಮಾರ್ಟ್‌ಫೋನ್ ತಯಾರಿಸಲಾಗಿದೆ. 5 ಇಂಚು ಹೆಚ್‌ಡಿ ಡಿಸ್‌ಪ್ಲೇ, ಎಲ್‌ಇಡಿ ಫ್ಲ್ಯಾಶ್‌ನೊಂದಿಗೆ ಹಿಂಬದಿ 8 ಮೆಗಾಪಿಕ್ಸೆಲ್ ಮತ್ತು ಮುಂಬದಿಯಲ್ಲಿ 2 ಮೆಗಾ ಪಿಕ್ಸೆಲ್ ಕ್ಯಾಮೆರಾಗಳನ್ನು ಹೊಂದಿದೆ. ಹೆಚ್ 265 ಹಾರ್ಡ್‌ವೇರ್ ಡಿಕೋಡರ್ ಇದ್ದು ಇದು ಸಿನಿಮಾ ಮಟ್ಟದ ಗ್ರಾಫಿಕ್ ಡಿಸ್‌ಪ್ಲೇ ಒದಗಿಸುತ್ತದೆ.

ಬಿಳಿ ಮತ್ತು ಕಪ್ಪು ಬಣ್ಣಗಳಲ್ಲಿ ಸಿಗುತ್ತದೆ. ಬೆಲೆ 4,999 ರೂಪಾಯಿ.
ಮಾಹಿತಿಗೆ: 7022966836

## ಮೊಡವೆ ನಿವಾರಣೆಗೆ ಕ್ರೀಮ್

ಮುಖದ ಮೇಲೆ ಮೂಡಿದ ಮೊಡವೆ, ಕಪ್ಪುಕಲೆ ನಿವಾರಣೆಗೆ ಎಫಾಕ್ಲೇರ್ ಎಂಬ ಹೊಸ ಕ್ರೀಮ್ ಒಂದನ್ನು ಲರೋಚ್ ಪೊಸೆ ಕಂಪೆನಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ತ್ವಚೆಯಲ್ಲಿರುವ ನಿರ್ಜೀವ ಕಣಗಳನ್ನು ತೆಗೆದುಹಾಕಿ ಚರ್ಮವನ್ನು ಹೊಳಪು ಆಗುವ ಹಾಗೆ ಮಾಡುತ್ತದೆ. ಎಣ್ಣೆ ಚರ್ಮ, ಸೂಕ್ಷ್ಮ ಚರ್ಮ, ಒಣ ಚರ್ಮ ಹೀಗೆ ಯಾವುದೇ ಚರ್ಮ ಪ್ರಕೃತಿ ಇದ್ದವರಿಗೂ ಸೂಕ್ತವಾದದ್ದು ಎನ್ನುವುದು ಕಂಪೆನಿ ಮಾತು. ಬೆಲೆ 200 ಎಂಎಲ್‌ಗೆ 1250 ರೂಪಾಯಿ.

ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ.
ವಿವರಕ್ಕೆ: 022 67003333

